

## ನಕ್ಕು ಬಿಡಿ




ಅಧಿಕಾರಿಗಳ ಒಂದು ಸಭೆಯಲ್ಲಿ ಭಾಷಣ ಮಾಡುತ್ತಿದ್ದ ಅಧ್ಯಕ್ಷರು ಒಂದು ಚೀಟಿಯಲ್ಲಿ ಏನೋ ಬರೆದು ಸೆಕ್ಯೂರಿಟಿ ಅಧಿಕಾರಿಗೆ ಆ ಚೀಟಿಯನ್ನು ಕೊಟ್ಟರು. ಅವರು ಕೂಡಲೇ ಸಭೆಯಲ್ಲಿದ್ದ ಒಬ್ಬನನ್ನು ಹೊರಗೆ ಕಳುಹಿಸಿದರು.

ಸಭೆ ಮುಗಿದ ಮೇಲೆ ಅಧ್ಯಕ್ಷರು ಸೆಕ್ಯೂರಿಟಿ ಅಧಿಕಾರಿಯನ್ನು ಕೇಳಿದರು, 'ನಾನು ಚೀಟಿಯಲ್ಲಿ ವಿರೋಧ ಪಕ್ಷದ ಒಬ್ಬ ವ್ಯಕ್ತಿ ಗೂಢಚರ್ಯೆ ಮಾಡ್ತಿದ್ದಾನೆ ಅಂತ ಬರೆದಿದ್ದೆ. ನೀವು ಅವನನ್ನು ಅಷ್ಟು ಬೇಗ ಹೇಗೆ ಹಿಡಿದಿರಿ?'

'ಶತ್ರುಗಳು ಎಂದೂ ನಿದ್ರೆ ಮಾಡುವುದಿಲ್ಲ ಎಂದು ನಮಗೆ ತರಬೇತಿಯಲ್ಲಿ ಹೇಳಿ ಕೊಡಲಾಗಿದೆ. ನೀವು ಭಾಷಣ ಮಾಡುವಾಗ ಆ ವ್ಯಕ್ತಿ ಮಾತ್ರ ಎಚ್ಚರವಿದ್ದ!'

★★★

ಗಂಡ ಪುಸ್ತಕವೊಂದನ್ನು ಕೆಳಗಿಡುತ್ತಾ ಹೆಂಡತಿಯನ್ನು ನೋಡಿ ಹೇಳಿದ, 'ಈ ಪುಸ್ತಕದಲ್ಲಿ ಏನು ಬರೆದಿದೆಯೆಂದರೆ...'

'ಅದ್ಯಾವ ಪುಸ್ತಕ?' ಹೆಂಡತಿ ವಿಚಾರಿಸಿದಳು.

'ಸುಖಕರ ವೈವಾಹಿಕ ಜೀವನದ ರಹಸ್ಯ.'

'ಪುಸ್ತಕದಲ್ಲಿ ಏನು ಬರೆದಿದ್ದಾನೆ ಲೇಖಕ?'

'ಮನೆಯ ವಿಷಯದಲ್ಲಿ ಪುರುಷನಿಗೆ ಮನಬಿಚ್ಚಿ ಮಾತನಾಡುವ ಹಕ್ಕಿರಬೇಕು ಎಂದು ಹೇಳಿದ್ದಾನೆ.'

'ಪಾಪ! ಈ ಮಾತನ್ನೂ ಅವನು ಬರದೇ ಹೇಳಬೇಕಾಯ್ತು!' ಹೆಂಡತಿ ಮುಗುಳ್ನಕ್ಕಳು.

★★★

ಸರ್ಕಸ್‌ನಲ್ಲಿ ಒಂದು ಕಾರ್ಯಕ್ರಮವನ್ನು ತೋರಿಸಲಾಗುತ್ತಿತ್ತು. ಸ್ವಿಮ್ ಸೂಟ್‌ನಲ್ಲಿ ಯುವತಿಯೊಬ್ಬಳು ಬಂದು ಸಿಂಹದ ಬೋನನ್ನು ತೆರೆಯುತ್ತಾಳೆ. ಒಳಗೆ ಹೋಗಿ ಅದರ ಎದುರಿಗೆ ಕೂರುತ್ತಾಳೆ. ನಂತರ ಅವಳು ಸಿಂಹದ ಗಲ್ಲಗಳನ್ನು ನೇವರಿಸುತ್ತಾಳೆ. ಸಿಂಹ ಬಾಯಿ ತೆರೆಯುತ್ತದೆ. ಯುವತಿ ಅದರ ಬಾಯಿಗೆ ಒಂದು ಚಾಕೊಲೇಟನ್ನು ಹಾಕುತ್ತಾಳೆ.

ಅವಳು ಹೀಗೆ ಏಳೆಂಟು ಚಾಕೊಲೇಟುಗಳನ್ನು ಸಿಂಹದ ಬಾಯಿಗೆ ಹಾಕಿದ ಮೇಲೆ ಪ್ರೇಕ್ಷಕರಲ್ಲಿ ಒಬ್ಬ ಗಟ್ಟಿಯಾಗಿ ಹೇಳುತ್ತಾನೆ. 'ಇದೇನಿದು? ಇದನ್ನು ಯಾರು ಬೇಕಾದರೂ ಮಾಡಬಹುದು.'

'ನೀನು ಮಾಡ್ತೀಯಾ?' ಒಬ್ಬ ಅವನನ್ನು ಪ್ರಶ್ನಿಸುತ್ತಾನೆ.

'ಇದರಲ್ಲಿ ಅಂಥ ಸಾಹಸವೇನಿದೆ? ನೀವು ಸಿಂಹವನ್ನು ಬೋನಿನಿಂದ ಬೇರ್ಪಡಿಸಿ. ಆಮೇಲೆ ನಾನೂ ಸಹ ಪ್ರೀತಿಯಿಂದ, ಯುವತಿಯ ಕೈಯಿಂದ ಚಾಕೊಲೇಟನ್ನು ಹೇಗೆ ತಿನ್ತೀನಿ ಅಂತ ನೋಡಿ' ಎಂದ ಅವನು.

★★★

ಎರಡು ಸೊಳ್ಳೆಗಳು ಸ್ವಡಿ ಮಾಡುತ್ತಿದ್ದವು.

'ನಾನು ಭವಿಷ್ಯದಲ್ಲಿ ಡಾಕ್ಟರ್ ಆಗ್ತೀನಿ' ಎಂದಿತು ಮೊದಲ ಸೊಳ್ಳೆ.

'ನಾನು ಭವಿಷ್ಯದಲ್ಲಿ ಎಂಜಿನಿಯರ್ ಆಗ್ತೀನ' ಎಂದಿತು ಎರಡನೆಯ ಸೊಳ್ಳೆ. ಅಷ್ಟರಲ್ಲಿ ಮನೆ ಮಾಲೀಕ ಮಾರ್ಟಿನ್ ಹಚ್ಚಿದ.

'ಮಾಲೀಕ ನನ್ಮಗ ನಮ್ಮ ಕರೀಯರ್ ಅನ್ನೇ ಹಾಳು ಮಾಡಿದ!' ಎಂದು ಎರಡೂ ಸೊಳ್ಳೆಗಳು ಒಟಕಿತ್ತವು.

(ಸಂ)-ಡಿ.ಎನ್. ಶ್ರೀನಾಥ್

### ಅನುಭವ

ಅಮ್ಮಾವ್ರು: ಏನೇ ಮಂಜಿ ನಮ್ಮ ಮನೆಯಲ್ಲಿ ಕೆಲಸ ಬಿಟ್ಟು ಹುಚ್ಚಾಸ್ಪತ್ರೆಗೆ ಕೆಲಸಕ್ಕೆ ಹೋಗ್ತೀನಿ ಅಂತೀಯಲ್ಲ. ನಿನಗೆ ಅಲ್ಲಿ ಕೆಲಸ ಮಾಡುವುದಕ್ಕೆ ಏನು ಅನುಭವ ಇದೆಯೇ?

ಮಂಜಿ: ಏನಮ್ಮ, ಹಿಂಗ್ ಹೇಳ್ತೀರಿ! ನಿಮ್ಮ ಮನೆಯಲ್ಲಿ ಹತ್ತು ವರ್ಷದಿಂದ ಕೆಲಸ ಮಾಡಲಿಲ್ಲವೇ ನಾನು!

★★★

### ದ್ವೇಷ

ಯುವತಿ: ಲೇ ಒಂದು ವಿಷಯ ಇದೆ. ಅದನ್ನು ನಿನಗೆ ಹೇಳಿದರೆ ನೀನು ಹೊಟ್ಟೆ ಹುಣ್ಣಾಗಿ ಸಾಯ್ತೀಯ.

ಇನ್ನೊಬ್ಬಳು: ಹಾಗಾದ್ರೆ ತಡಿಯೇ, ನಮ್ಮ ಅತ್ತೇನ ಕರೀತೀನಿ ಅವರಿಗೆ ಹೇಳುವಂತೆ!

(ಸಂ)-ಭೂಮಿಕಾ ಸ.ಹೆಗಡೆ, ಅಳ್ಳೀಹದ್ದ


# ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು

9611002265

ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ

ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.

ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.

ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.

ಆಫೀಸ: ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.

ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.

0836-2282265
E-mail: mbjoshiastro@gmail.com